**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಒಎಸ್  285/2013**

**ಪಿಡಬ್ಲ್ಯೂ 2**

**ಸಾಕ್ಷಿಯನ್ನು ದಿನಾಂಕ 11.01.2024 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ  ಎಮ್.ಸಿ.ಎಸ್. ವಕೀಲರಿಂದ ಪ್ರತಿವಾದಿ ಪರ ವಕೀಲರುಃ**

ನಾನು ಕೆಂಚೇಗೌಡರವರ ಸೊಸೆ.  ನನ್ನ ಗಂಡನ ಹೆಸರು ಕೃಷ್ಣೇಗೌಡ.  ನನ್ನ ಮಗಳು ನ್ಯಾಯಾಲಯಕ್ಕೆ ಬರಲು ತೊಂದರೆ ಇತ್ತು.  ಈ ದಾವೆಯನ್ನು ಮೊದಲು ನನ್ನ ಮಗಳೇ ಹೂಡಿದ್ದಳು. ನನ್ನ ಚಿಕ್ಕ ಮಗಳು ದೇವಿಕೆ ಬರಬಹುದಿತ್ತು ಎಂದರೆ ಸರಿ. ನನಗೆ ದಾವೆ ಬಗ್ಗೆ ಮಾಹಿತಿ ಇದೆ.  ನನ್ನ ಮಾವ ಮತ್ತು ನಾವು ಒಟ್ಟು ಕುಟುಂಬದಲ್ಲಿ ನಮ್ಮ ಊರಿನಲ್ಲಿದ್ದೇವು. ನಾನು ಪ್ರಸ್ತುತ ಶ್ರೀರಾಮ ಬ್ಲಾಕ್, ಬೋವಿ ಕಾಲೋನಿಯಲ್ಲಿ ವಾಸವಿದ್ದೇನೆ.

2. ದಾವಾ ಸ್ವತ್ತಿನಲ್ಲಿ ಯಾರ ಯಾರು ಯಾವ ಸ್ವತ್ತುಗಳಲ್ಲಿ ವ್ಯವಸಾಯ ಮಾಡುತ್ತಿದ್ದೀರಿ ಎಂಬ ಪ್ರಶ್ನೆಗೆ ನಾನು ಮತ್ತು ನನ್ನ ಮೈದ ದಾವಾ ಎಲ್ಲ ಸ್ವತ್ತುಗಳಲ್ಲಿ ಒಟ್ಟಿಗೆ ಉಳುಮೆ ಮಾಡುತ್ತಿದ್ದೇವೆ.  ದಾವಾ ಸ್ವತ್ತಿನ ಎಲ್ಲ ಖಾತೆ ನನ್ನ ಮಾವನ ಹೆಸರಿನಲ್ಲಿದೆ.  ನಿಪಿ 8 ದಾವಾ ಸ್ವತ್ತಿನ ಐಟಂ ನಂ.4 ರ ಸ್ವತ್ತಾಗಿದ್ದು ಅದರಲ್ಲಿ  ಕೃಷ್ಣೇಗೌಡ ಬಿನ್ ಕೆಂಚೇಗೌಡ ರವರ ಹೆಸರಿಗೆ 1 ಎಕರೆ 34 ಗುಂಟೆ ಮತ್ತು ಶ್ರೀನಿವಾಸ ಬಿನ್ ಕೆಂಚೇಗೌಡರವರ ಹೆಸರಿಗೆ 1 ಎಕರೆ 34 ಗುಂಟೆ ಎಂದು ಪಹಣಿಯಲ್ಲಿ ನಮೂದು ಇದೆ ಎಂದರೆ ಸರಿಯಲ್ಲ.   2 ನೇ ಪ್ರತಿವಾದಿ ದಿನಾಂಕ 30.05.2005 ರಲ್ಲಿ ದಾವಾ ಐಟಂ 1 ನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.  5 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ನಾನು ಪಾರ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )

ಪ್ರಧಾನ  ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ